ಕನ್ನಡಪ್ರಭ

# ಮೀನಾಕ್ಷಿ ಡಬಲ್ ದಾಖಲೆ

**ಬೆಂಗಳೂರು:** ಈಜು ಕೊಳದಲ್ಲಿ ಮೀನಿನಂತೆ ಈಜಿದ ಬೆಂಗಳೂರು ಜೈನ್ ವಿಶ್ವವಿದ್ಯಾಲಯದ ಮೀನಾಕ್ಷಿ ವಿಕೆಆರ್, ಎರಡು ಕೂಟ ದಾಖಲೆಯನ್ನು ನಿರ್ಮಿಸುವ ಮೂಲಕ ಅಖಿಲ ಭಾರತ ಅಂತರ್ ವಿಶ್ವವಿದ್ಯಾಲಯ ಈಜು ಚಾಂಪಿಯನ್‌ಶಿಪ್‌ನಲ್ಲಿ ಮಿಂಚು ಹರಿಸಿದ್ದಾರೆ.

ಜೈನ್ ವಿವಿ ಆಶ್ರಯದಲ್ಲಿ ನಡೆಯುತ್ತಿರುವ ಚಾಂಪಿಯನ್‌ಶಿಪ್‌ನ ಮೂರನೇ ದಿನವಾದ ಮಂಗಳವಾರ, ಮೀನಾಕ್ಷಿ ಮಹಿಳೆಯರ 50 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿಮತ್ತು 100 ಮೀಟರ್ ಫ್ಲೈ ವಿಭಾಗದಲ್ಲಿ ಕೂಟ ದಾಖಲೆ ನಿರ್ಮಿಸಿ ಚಿನ್ನದ ಪದಕ ಪಡೆದಿದ್ದಾರೆ.

ಮಹಿಳೆಯರ 50 ಮೀಟರ್ ಬ್ಯಾಕ್ ಸ್ಟ್ರೋಕ್ ವಿಭಾಗದಲ್ಲಿ 31:66 ಸೆಕೆಂಡ್ ಗಳಲ್ಲಿ ಗುರಿ ತಲುಪಿದ ಮೀನಾಕ್ಷಿ ಅಗ್ರ ಸ್ಥಾನ ಪಡೆದರು. ಈ ಮೂಲಕ ತಮ್ಮ ಹಿಂದಿನ ದಾಖಲೆ 32:24 ಸೆ. ದಾಖಲೆ ಹಿಂದಿಕ್ಕಿದ್ದಾರೆ.

ಇನ್ನು 100 ಮೀ. ಫ್ಲೈ ವಿಭಾಗದಲ್ಲೂ ಗಮನಾರ್ಹ ಪ್ರದರ್ಶನ ನೀಡಿದ ಮೀನಾಕ್ಷಿ 1:06:32 ನಿಮಿಷದಲ್ಲಿ ಗುರಿ ತಲುಪಿ ಹೊಸ ಕೂಟ ದಾಖಲೆ ನಿರ್ಮಿಸಿದ್ದಾರೆ. ಈ ಮೂಲಕ ಬೆಳಗಾವಿಯ ಪೂಜಾ ಆಳ್ವಾ ಅವರ 1:06:47 ದಾಖಲೆಯನ್ನು ಕೂದಲೆಳೆಯ ಅಂತರದಲ್ಲಿ ಮುರಿದಿದ್ದಾರೆ.

ಇದೇ ವಿಭಾಗದಲ್ಲಿ ದೆಹಲಿ ವಿವಿಯ ದಿವ್ಯಾ ಎಸ್ ಬೆಳ್ಳಿ ಪದಕ ಪಡೆದರೆ, ಬೆಂಗಳೂರಿನ ಸ್ನೇಹಾ ಟಿ ಕಂಚಿನ ಪದಕ ಪಡೆದರು.

ಇನ್ನು 50 ಮೀ. ಬ್ಯಾಕ್‌ಸ್ಟ್ರೋಕ್‌ನ ಪುರುಷರ ವಿಭಾಗದಲ್ಲಿ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅರವಿಂದ್ ಎಂ 27:90 ಸೆ.ಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ಪಡೆದರು.

## ಚಾಂಪಿಯನ್‌ಶಿಪ್‌ನ ಎರಡನೇ ದಿನದ ಫಲಿತಾಂಶ

**ಪುರುಷರ ವಿಭಾಗ: 50 ಮೀ. ಬ್ಯಾಕ್‌ಸ್ಟ್ರೋಕ್- 1.ಅರವಿಂದ್ ಎಂ (ವಿಟಿಯು), 2.ಶ್ರೇಯಸ್ ಎಸ್, ಸಾಚೆತ್ ಎಂಜಿನಿಯರ್ ಮತ್ತು ರಕ್ಷಿತ್ ಶೆಟ್ಟಿ ಜಂಟಿ 3ನೇ ಸ್ಥಾನ, (27.90)**

**100 ಮೀ. ಫ್ರೀಸ್ಟೈಲ್- 1.ಅಮನ್ ಘಾಯ್, 2.ಬಾಬಿ ರಾಣ, 3.ಕರಣ್ ಬ್ರಾರ್, (57.37)**

**400 ಮೀ. ಫ್ರೀಸ್ಟೈಲ್- 1.ಸೌರಬ್ ಸಗ್ವೇಕರ್, 2.ಸಂಜಯ್ ರಾಜ್, 3.ಯುಗೇಶ್ ಕುಮಾರ್, (4:04.59)**

**4200 ಮೀ. ಫ್ರೀಸ್ಟೈಲ್ ರಿಲೇ- 1.ವಿಟಿಯು, 2.ಕೇರಳ ವಿವಿ, 3.ಪಂಜಾಬ್ ವಿವಿ, (8:44.23)**

**ಮಹಿಳೆಯರ ವಿಭಾಗ: 50 ಮೀ. ಬ್ಯಾಕ್‌ಸ್ಟ್ರೋಕ್- 1.ಮೀನಾಕ್ಷಿ (ಜೈನ್ ವಿವಿ), 2.ರಾವೂಫ್ ಗುಲ್ನಾಜ್, 3.ಅನನ್ಯ ಪ್ರನಿಗ್ಯೆ, (31.66)**

**100 ಮೀ. ಫ್ರೀಸ್ಟೈಲ್- 1.ಮೀನಾಕ್ಷಿ (ಜೈನ್ ವಿವಿ), 2.ದಿವ್ಯಾ ಸಾತಿಜಾ, 3.ಸ್ನೇಹಾ ಟಿ, (1:06.32)**

**400 ಮೀ. ಫ್ರೀಸ್ಟೈಲ್- 1.ಸ್ನೇಹಾ ಟಿ, 2.ಪ್ರತಿಮಾ ಕೊಲ್ಲಾಳಿ, 3.ಪೂರ್ವಾ ಶೆಟ್ಟಿ, (4:48.97)**

**4200 ಮೀ. ಫ್ರೀಸ್ಟೈಲ್ ರಿಲೇ- 1.ದೆಹಲಿ ವಿವಿ, 2.ಕಲ್ಲಿಕೋಟೆ ವಿವಿ, 3.ಕೇರಳ ವಿವಿ, (9:49.56)**

**800 ಮೀ. ಫ್ರೀಸ್ಟೈಲ್ ರಿಲೇ- 1.ಸ್ನೇಹ ಟಿ, 2.ಪ್ರತಿಮಾ ಕೊಲ್ಲಾಳಿ, 3.ಪೂರ್ವಾ ಶೆಟ್ಟಿ (ಬೆಂಗಳೂರು ಜೈನ್ ವಿವಿ), (9:59.00).**

**ಡೈವಿಂಗ್ (3ಎಂ ಸ್ಪ್ರಿಂಗ್ ಬೋರ್ಡ್): ಪುರುಷರ ವಿಭಾಗ: 1.ಅಜಯ್ ಬಿ, 2.ಗೌರವ್ ರಘುವಂಶಿ, 3.ಅತರು ಅಗರ್ ವಾಲ್, (243.40)**

**ಮಹಿಳೆಯರ ವಿಭಾಗ: 1.ದಿವ್ಯಾ ತೇಜಾ (ವಿಟಿಯು), 2.ಸ್ವಾತಿ ವಿದಾಪ್, 3.ಧಾರಾ ತನುಕಾ, (156.45)**



100 ಮೀ. ಫ್ರೀಸ್ಟೈಲ್ ವಿಭಾಗದಲ್ಲಿ ಚಿನ್ನದ ಪದಕ ಪಡೆದ ಗುರುನಾನಕ್ ದೇವ್ ವಿವಿಯ ಅಮನ್ ಘಾಯ್.